ರಾಜ್ಯದಲ್ಲಿರುವ ಎಸ್. ಸಿ. ಮತ್ತು ಎಸ್. ಟಿ. ವರ್ಗದ ಬಿ. ಸಿ. ಹಾಸ್ಟಲ್‌ಗಳಿಗೆ ಸೂಪರಿಂಟೆಂಡೆಂಟ್‌ರ ನೇಮಕ

೨೯೩. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಅನುಸೂಚಿತ ಮತ್ತು ಅನುಸೂಚಿತ ಆದಿಮ ಜಾತಿಗಳು ಮತ್ತು ಇತರ ಹಿಂದುಳಿದ ವರ್ಗದವರ ವಿದ್ಯಾರ್ಥಿನಿಲಯಗಳಲ್ಲಿ ಹಾಸ್ಟಲ್ ಸೂಪರಿಂಟೆಂಡೆಂಟ್ ಆಗಿ ಕೆಲಸ ಮಾಡುತ್ತಿರುವ ನೌಕರರು ಖಾಯಂ ಆಗಿ ಸರ್ಕಾರದಿಂದ ನೇಮಕರಾದವರೆ,

ಆ) ದಿನ ನಿತ್ಯದ ಭತ್ಯದ ಆಧಾರದ ಮೇಲೆ ನೇಮಕವಾಗಿರುವ ಸೂಪರಿಂಟೆಂಡೆಂಟ್ ನೌಕರರ ಸಂಖ್ಯೆ ಎಷ್ಟು ?

ಇ) ದಿನ ನಿತ್ಯದ ಭತ್ಯದ ನೌಕರರಿಂದ ಸರಿಯಾದ ರೀತಿ ಮೇಲ್ವಿಚಾರಣೆ ಇಲ್ಲದೆ ವಿದ್ಯಾರ್ಥಿನಿಲಯದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತೊಂದರೆ ಆಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ವಿ. ಎಲ್. ಪಾಟೀಲ್. (ಸಮಾಜ ಕಲ್ಯಾಣ ಸಚಿವರು).—

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳ ೬೪೭ ಹಾಸ್ಟಲ್ ಸೂಪರಿಂಟೆಂಡೆಂಟ್ ಹುದ್ದೆಗಳ ಪೈಕಿ ೪೪೪ ಹುದ್ದೆಗಳಲ್ಲಿ ಖಾಯಂ ನೌಕರರಿದ್ದಾರೆ. ಹಿಂದುಳಿದ ವರ್ಗಗಳ ೬೦ ಹಾಸ್ಟಲ್ ಸೂಪರಿಂಟೆಂಡ್ ಹುದ್ದೆಗಳ ಪೈಕಿ ೫೯ ಹುದ್ದೆಗಳಲ್ಲಿ ಖಾಯಂ ನೌಕರರಿದ್ದಾರೆ

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ೧೫೫ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ೨೨ ದಿನಗೂಲಿ ನೌಕರರಿದ್ದಾರೆ.

ಇ) ಹೌದು

ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಇಲಾಖೆಯಲ್ಲಿ ಖಾಯಂ ನೌಕರರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗಿದ್ದು ಆರ್ಜಿಗಳ ಪರಿಶೀಲನೆ ನಡೆದಿದೆ. ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಕೆಲವು ದಿನಗೂಲಿ ನೌಕರರು ಕರ್ನಾಟಕ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ತಡೆಯಾಜ್ಞೆಯನ್ನು ತೆರವು ಮಾಡಿಸಲು ಮತ್ತು ಖಾಯಂ ನೌಕರರನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

Regarding abolition of toll collection on bridges.

180. SRI MALLANNA GOWDA PATIL (Sankeshwar) –Will the Minister for Public Works be pleased to state.

(A) Please indicate the names of Bridges on which Toll is being collected from vehicle owners.

(B) From whom the toll is being collected and what is the amount of toll collected to date on the bridge constructed across Ghataprabha river.

(C) What is the total amount of tol collected from all the toll plazas ?